

ಸ್ವರೂಪಗಳನ್ನು ಬಿಚ್ಚಿಕೊಳ್ಳುತ್ತಾ ಹೋದಿರಿ. ಮನುಷ್ಯ ಸತ್ಯ ಹೇಳಿದರೂ 'ನಿಗೂಢ'ವೇ! ಅನುಭವರಾಹಿತ್ಯದ ಸಾಹಿತ್ಯಕ್ಕೆ ರೋಸಿಹೋದ ಜಗನ್ನಾಥನಲ್ಲಿ ಕಾಣುವುದು, ಕೇಳುವುದು 'ಹೊಸದಿಗಂತದ ಕಡೆಗೆ' ಮುಖ ಮಾಡಿ ನಿಂತ ತೇಜಸ್ವಿಯವರ ನುಡಿಗಳೇ. ನೀವು ಆ ಮಾತುಗಳನ್ನು ಎದುರುಗೊಂಡುದು ಬೇರೆಯದೇ ನೆಲೆಯಿಂದ: 'ಅನುಭವ ಸಹಿತ ಮನುಷ್ಯನನ್ನು ಅನಾಥನನ್ನಾಗಿ ಮಾಡುತ್ತದೆ.' ಅಷ್ಟೇ ಅಲ್ಲ, 'ಅನುಭವದ ಆಯಸ್ಕಾಂತ ಶಕ್ತಿಯಲ್ಲಿ ತತ್ತರಿಸಿ ಚೇತನಕ್ಕೆ ಮಂಕು ಹಿಡಿಯಬಹುದು.' ಅದಕ್ಕೆ ಸಾಕ್ಷಿಯಾಗಿ ನಿಮ್ಮ ಬಾಳಿನ ಕಥೆ ಹೇಳತೊಡಗಿದಿರಿ. ತನ್ನ ಜೀವನದ 'ಭೌತ ಸತ್ಯ'ವಿದು ಎಂದಿರಿ. ಮೊದಲು ಒಬ್ಬ 'ಅಪ್ರಮುಖ ಬರಹಗಾರ'ನಾಗಿಯೂ, ನಂತರ ಗುಪ್ತಚರ ಇಲಾಖೆಯ ಉದ್ಯೋಗಿಯಾಗಿ ಕಾಮತ, ಡಿಸೋಜ, ಜಾಧವ ಮುಂತಾದ ಪಾತ್ರಗಳಾಗಿಯೂ ನೀವು ವಾಸ್ತವ ಬದುಕಿಗೆ ಒಡ್ಡಿಕೊಳ್ಳುತ್ತಾ ಬದುಕಿದವರು. ಅನೇಕ ವ್ಯಕ್ತಿತ್ವಗಳಾಗಿ ಬದುಕುವುದು ಮೊದಲು ಆಟವಾಗಿತ್ತು, ಈಗ ಅದೊಂದು ಸಂಕಟವಾಗಿದೆ. ('ಈ ಒಂದೇ ದೇಹದಲ್ಲಿ ಅಸಂಖ್ಯ ಆತ್ಮಗಳು ಹೊಕ್ಕು ಹೊರಬಿದ್ದಿವೆ, ಜಗನ್ನಾಥ' – ನಿಮ್ಮವೇ ನುಡಿಗಳು). ತನಗೊಂದು ಚಿರಂತನ ವ್ಯಕ್ತಿತ್ವ ಇಲ್ಲ ಎಂಬ ದುಗುಡದಲ್ಲಿದ್ದೀರಿ. ನಿಮ್ಮ ಪ್ರಜ್ಞೆಯಲ್ಲಿ 'ಅಸಂಖ್ಯಾತ ಅನುಭವಗಳು ಎದ್ದೆದ್ದು ಕುಣಿದಿವೆ.' ರಹೀಮನಾಗಿ ನೀವು ಎದುರಿಸಿದ ಚಿತ್ರಹಿಂಸೆ ಈಗಲೂ ನನ್ನ ಮೈ ನಡುಗಿಸುತ್ತದೆ. ಜಗನ್ನಾಥನಿಗೆ 'ಆಲೋಚಿಸಿದಷ್ಟೂ ಗೂಡಾರ್ಥಗಳಿರುವ ಮಂತ್ರದಂತೆ' ನೀವು ಕಾಣತೊಡಗಿದ್ದು ಸೋಜಿಗವಲ್ಲ. ಪ್ರಕೃತಿಯ ನಿಗೂಢತೆಯನ್ನು ಎದುರಿಸಲು ನೀವು ಸಜ್ಜಾಗಿ ನಿಂತಿದ್ದೀರಿ. ಅದು ಮನುಷ್ಯನ ನಿಗೂಢತೆಯನ್ನೂ ಎಚ್ಚರಿಸುವಂಥದು, ಸಲಹುವಂಥದು! ಆದರೆ ಜಗನ್ನಾಥನೋ, ಅನುಭವಗಳ ಪ್ರಳಯದಲ್ಲಿ ಸಿಕ್ಕು ನುಗ್ಗುನುರಿಯಾದಂತಾಗಿದ್ದನು.

ಇಡೀ ಕಥೆಯನ್ನು ನನಗೆ ಬೇಕಾದಂತೆ ಹಿಂದು ಮುಂದಾಗಿ ಹೇಗೇಗೋ ನೆನಪಿಸಿಕೊಳ್ಳುತ್ತ ನಿಮ್ಮೊಡನೆ ಮಾತಾಡುತ್ತಿದ್ದೇನೆ. ನಿಮ್ಮ ಬದುಕಿನ ಅನುಭವಗಳು ಯಾವ ಹೊತ್ತಿಗೂ ನಿಮ್ಮನ್ನು ನಾಶ ಮಾಡಬಹುದಾಗಿತ್ತು. ಅದೃಷ್ಟ, ಗೋಪಾಲಯ್ಯನಾಗಿ ಉಳಿದುಕೊಂಡಿರಿ. ನಿಮ್ಮ ಈ ಹೆಸರೂ, ಕಾರಂತರ 'ಬೆಟ್ಟದ ಜೀವ'ದ ನಾಯಕನ ಹೆಸರೂ ಒಂದೇ ಆಗಿರುವುದು ಎಂಥ ಸೋಜಿಗ! ನನಗಂತೂ ಇದು ಬರಿಯ ಕಾಕತಾಳೀಯ ಅನಿಸುವುದಿಲ್ಲ.

ಗೋಪಾಲಯ್ಯ, ನನ್ನದೊಂದು ವಿಚಿತ್ರ ಆಸೆ. ನಿಮ್ಮ ಹಳ್ಳಿಗೆ ಬರಬೇಕು, ನಿಮ್ಮೊಡನೆ ಒಂದೆರಡು ಹಗಲು–ರಾತ್ರಿ ಕಳೆಯಬೇಕು, ಉಗ್ರಗಿರಿಯನ್ನು ಕಾಣುತ್ತಾ, ದಟ್ಟ ಕಾಡಿನ ನಡುವೆ ದಟ್ಟ ಕತ್ತಲೆಯಲ್ಲಿ ನಿಮ್ಮ ಕಥೆ ಕೇಳುತ್ತಾ ನಿದ್ದೆ ಹೋಗಬೇಕು. ●